ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಯಾರು ಈ ಸೌಲಭ್ಯವನ್ನು ಹೊಂದಬೇಕು ಎನ್ನುವ ವ್ಯಕ್ತಿಗಳು ಈ ಕೆಲಸ ಮಾಡಿದ್ದಾರೆ ಅವರಿಗೆ, ಅಧಿಕಾರಿಗಳು ಕೂಡ. ಶಾಮೀಲಾಗಿ ಸರ್ಟಿಫಿಕೇಟ್ ಕೊಟ್ಟಿರುವುದರಿಂದ 1967ರ ಎಂ.ಸಿ.ಎಸ್.ಆರ್. ರೂಲ್ಸ್ ಪ್ರಕಾರ ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಹರಿಜನಗಿರಿಜನರಿಗೆ ಸಿಕ್ಕತಕ್ಕ ಸೌಲಭ್ಯವನ್ನು ಬೇರೆಯವರು ಪಡೆಯುಬೇಕು ಎನ್ನುವ ಆಸೆಯಿಂದ ಕೆಲವು ಅಧಿಕಾರಿಗಳು ತಪ್ಪಿಸಿ ಮಾಡಿದೆ ಹರಿಜನರು ಹಿಂದುಳಿದ ಪೆಡ್ಯೂರ್ಡ್‌ಕ್ಯಾಸ್ಟ್ ಮತ್ತು ಪೆಡ್ಯೂರ್ಡ್ ಟ್ರೈಬ್ಸ್ ಪಂಗಡಕ್ಕೆ ಸೇರಿದವರು ಎಂದು ಅನೇಕ ಸರ್ಟಿಫಿಕೇಟ್ ಕೊಟ್ಟು ಆ ಸೌಲಭ್ಯ ಪಡೆಯುವುದಕ್ಕೆ ಪ್ರಯತ್ನ ಪಡುತ್ತಾ ಇದ್ದಾರೆ. ಆದುದರಿಂದ ಕೆಲವು ಸಂಗತಿಗಳನ್ನು ಪತ್ತೆಹಚ್ಚಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಯಾರಾದರೂ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ಏತಕ್ಕೆ ಕಳುಹಿಸಬಾರದು ? ಅದರಿಂದ ಮುಂದೆ ಆಗತಕ್ಕ ತಪ್ಪುಗಳನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಸಮಾಜಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಯಾರು ಯಾರು ಸರ್ಟಿಫಿಕೇಟ್ ಕೊಡುವ ಅಧಿಕಾರವಿದೆಯೋ ಅಂಥ ಎಲ್ಲಾ ಅಧಿಕಾರಿಗಳಿಗೂ ಕೂಡ ಅವರಿಗೆ ತಿಳುವಳಿಕೆ ಕೊಟ್ಟಿದ್ದೇವೆ. ನೆನ್ನೆತಾನೇ ಡಿವಿಜನರ್ ಕಮೀಷನರ್ ಮತ್ತು ಡೆಪ್ಯುಟಿ ಕಮೀಷನರ್ ಕಾನ್‌ಫ್ರೆನ್ಸ್‌ನಲ್ಲಿ ಅವರಿಗೆ ತಿಳುವಳಿಕೆ ಕೊಟ್ಟಿದ್ದೇವೆ. ಸಾಧ್ಯವಾದಷ್ಟು ತಪ್ಪಿಸುವುದಕ್ಕೆ ನಾವು ಸರ್ವ ಪ್ರಯತ್ನ ಮಾಡಿದ್ದೇವೆ.

SHORT NOTICE QUESTION AND ANSWER

Vacancies of Posts of Doctors in Chickmagalur District

23. **Sri G. PUTTASWAMY** (Mudigere).—

Will the Minister for Health be pleased to state:—

(*a*) whether it has come to the notice of the Government that lot of inconvenience is caused to the patients due to failure of E.C G. machine and non-availability of 'X' ray films in Sri Malle Gowda General Hospital, Chickmagalur ;

(*b*) whether it has come to the notice of the Government that inconvenience is caused due to absence of required number of Doctors in Kalyanamma Maternity Home, Chickmagalur ;

(*c*) whether it has come to the notice of the Government that there are no required number of doctors in Kalasa Hospital, Mudigere Taluk, Chickmagalur District and other Hospitals of the Districts ;

(*d*) the steps taken by the Government in this behalf ?

Sri H. SIDDAVEERAPPA (Minister for Health).—

(*a*) Yes.

(*b*) Yes. Two posts of Doctors are vacant.

(*c*) Some posts of Doctors are vacant.

(*d*) Action will be taken to fill up the vacant posts shortly.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರು ಮುಲ್ಲೇಗೌಡ ಜನರಲ್ ಆಸ್ಪತ್ರೆಯಲ್ಲಿ ಇ.ಸಿ.ಜಿ. ಮೆಷಿನ್ ಕೆಟ್ಟುಹೋಗಿರುವುದರಿಂದ ಆಗಿರತಕ್ಕ ಅನಾನುಕೂಲದ ಪರಿಹಾರಕ್ಕೆ ಏನು ಏರ್ಪಾಡು ನಡೆಸುತ್ತಿದ್ದೀರಿ ? ಈಗ ಅಲ್ಲಿರುವ ರೋಗಿಗಳಿಗೆ ತೊಂದರೆಯಾಗದೆ ಇರುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಾ ?

† ಶ್ರೀ ಎಚ್. ಸಿದ್ದವೀರಪ್ಪ.—ತಮಗೆ ಗೊತ್ತಿರುವ ಹಾಗೆ ಇ.ಸಿ.ಜಿ. ಮೆಷಿನ್‌ಗೆ ಆರ್ಡರ್ ಕೊಟ್ಟಿದ್ದೇವೆ, ಅದು ಬಂದು ಇ.ಸಿ.ಜಿ. ಮೆಷಿನ್ ಇನ್‌ಸ್ಟಾಲ್ ಆಗಬೇಕು, ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇಷ್ಟರಲ್ಲಿ ಆ ತೊಂದರೆ ಬಗೆಹರಿಯುತ್ತದೆ ಎಂದು ತಿಳಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.— ಸ್ವಾಮಿ, ತಾವು (ii) ಗೆ ಉತ್ತರವಾಗಿ ಕೆಲವು ವೈದ್ಯರುಗಳು ಹುದ್ದೆ ಖಾಲಿ ಇವೆ ಎಂದು ಹೇಳಿದ್ದೀರಿ. ಯಾವ ಯಾವ ಆಸ್ಪತ್ರೆಗಳಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಚಿಕ್ಕಮಗಳೂರು ಮೆಟರ್ನಿಟಿ ಆಸ್ಪತ್ರೆಯಲ್ಲಿ ಎರಡು ಪೋಸ್ಟುಗಳ ಹುದ್ದೆ ಖಾಲಿ ಇವೆ, ಜನರಲ್ ಹಾಸ್ಪಿಟಲ್ ಎಪಿಡಿಮಿಕ್‌ನಲ್ಲಿ ಒಂದು ವೇಕೆನ್ಸಿ ಇದೆ. ಹಿರೇನೆಲ್ಲೂರ್‌ನಲ್ಲಿ 2 ವೇಕೆನ್ಸಿ ಖಾಲಿ ಇವೆ, ಅದು ಪ್ರಾರಂಭ ಆದಾಗಿನಿಂದಲೂ ಅಲ್ಲಿ ಖಾಲಿ ಇದೆ, ಅದು ಏತಕ್ಕೆ ಆ ರೀತಿ ಆಯಿತೋ ಗೊತ್ತಿಲ್ಲ. ಕಳಸದಲ್ಲಿ ಒಂದು ವೇಕೆನ್ಸಿ ಇದೆ, ಕೊಪ್ಪದಲ್ಲಿ ಒಂದು ವೇಕೆನ್ಸಿ ಇದೆ. ಕಂಬ್ಯೌಂಡ್ ಡಿಸ್ಪೆನ್ಸರಿಯಲ್ಲಿ ಒಂದು ವೇಕೆನ್ಸಿ ಇದೆ, ಒಟ್ಟು ಚಿಕ್ಕಮಗಳೂರು ಜಿಲ್ಲೆಯ ಆಸ್ಪತ್ರೆಗೆ 76 ಸ್ಯಾಂಕ್ಷನ್ಡ್ ಪೋಸ್ಟ್ಸ್ ಇವೆ. ಅದರಲ್ಲಿ ಇಷ್ಟು ಪೋಸ್ಟ್ಸ್ ವೇಕೆಂಟ್ ಇವೆ. ಅದಷ್ಟು ಜಾಗ್ರತೆಯಾಗಿ ಟೆಂಪರರಿಯಾಗಿಯಾದರೂ ಆ ವೇಕೆನ್ಸಿಗಳನ್ನು ಭರ್ತಿ ಮಾಡಲು ಪ್ರಯತ್ನ ಮಾಡುತ್ತೇವೆ ಒಟ್ಟಿನಲ್ಲಿ ಅದರಲ್ಲಿ ಕಷ್ಟ ಏನು ಇದೆ ಎಂದರೆ ಹೆಂಗಸರು ಯಾರೂ ನಮ್ಮ ಜಿಲ್ಲೆಗೆ ಬರುವುದಿಲ್ಲ. ನಮ್ಮ ಜಿಲ್ಲೆಯಲ್ಲಿರತಕ್ಕ ಹೆಣ್ಣುಮಕ್ಕಳನ್ನು ಎಂ.ಬಿ.ಬಿ.ಎಸ್‌ಗೆ ಕಳುಹಿಸಿ ತಯಾರು ಮಾಡಿದರೆ ನಮಗೇ ಅನುಕೂಲವಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಯಾರು ಹೆಂಗನರು ಅಲ್ಲಿಗೆ ಹೋಗುವುದಿಲ್ಲವೋ ಅಂತಹವರ ಮೇಲೆ ಸಿ ಸಿ.ಎ. ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಮನೆಯನ್ನೇ ಬಿಟ್ಟು ಹೋಗುವುದಿಲ್ಲ. ನಾವು ಗಂಡನ ಮನೆಗೇ ಹೋಗುತ್ತೇವೆ ಎಂದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆ ?

MADAM SPEAKER.—Now Question hour is over.

QUESTIONS FOR ANSWERS ON THE DAY
(but not taken up)

Lift irrigation Schemes in Ranebennur Taluk

368. Sri K. B. KOLIWAD (Ranebennur).—

Will the Minister for Public Works and Electricity be pleased to state :—

(*a*) the number of Lift Irrigation schemes investigated in Ranebennur taluk ;

(*b*) the number of them that will be taken up for execution this year ;

(*c*) the difficulties, if any, to take up all the lift irrigation eschmes for execution ?